ಖ) : ಬಿ. ಡಿ. ಒ. ಅಥವಾ ಜಡ್. ಪಿ. ಆಫೀಸಿನ ದಿನಗೂಲಿ ನೌಕರರ ರಿಜಿಸ್ಟರ್‌ನಲ್ಲಿ ಶಾಸಕರ ಹೆಸರು ನಮೂದಾಗಿರುವುದು.

ಶ್ರೀ ವೈಜನಾಥ್ ಪಾಟೀಲ್ (ಚಿಂಚೋಳಿ) : ಮಾನ್ಯ ಅಧ್ಯಕ್ಷರೇ, ಸುಮಾರು 6-7 ವರ್ಷಗಳ ಮೊದಲು ಕೆಲವು ದಿನಗೂಲಿ ನೌಕರರು ಬಿ. ಡಿ. ಒ. ಆಫೀಸ್‌ನಲ್ಲಾಗಲೀ ಅಥವಾ ಜಡ್. ಪಿ. ಆಫೀಸ್‌ನಲ್ಲಾಗಲೀ ಏನು ಕೆಲಸ ಮಾಡುತ್ತೀದ್ದಾರೋ, ಅವರ ಹೆಸರುಗಳು ಎನ್. ಎಮ್. ಆರ್. ಎನ್ನುವಂತಹ ರಿಜಿಸ್ಟರ್‌ನಲ್ಲಿ ಇರುತ್ತರೆ. ಆ ರಿಜಿಸ್ಟರ್‌ನಲ್ಲಿ ನನ್ನ ಹೆಸರು, ಮಾಜಿ ಮುಖ್ಯ ಮಂತ್ರಿಗಳ ಮಗನಾದ ಶ್ರೀ ಕೈಲಾಸನಾಥ ಪಾಟೀಲ್, ಅಂದಿನ ಶಾಸಕರಾದ ಶ್ರೀ ವೀರಯ್ಯ ಸ್ವಾಮಿ ಇವರೆಲ್ಲರ ಹೆಸರುಗಳನ್ನು ನಮೂದಿಸಿ ಹೆಬ್ಬೆಟ್ಟಿನ ಸಹಿ ಒತ್ತಿ ಹಣವನ್ನು ತೆಗೆದುಕೊಂಡಿದ್ದಾರೆ. ದಿನಗೂಲಿ ಎಂದರೆ ನಮಗೆ ಏನೂ ನಷ್ಟವಿಲ್ಲ. ಕೂಲಿ ಮಾಡುವುದು, ಮ್ಯಾನ್ಯುಯಲ್ ವರ್ಕ್ ಮಾಡುವುದು ತಪ್ಪಲ್ಲ. ಆದರೆ ನಮ್ಮದು ಹೆಬ್ಬೆಟ್ಟಿನ ಗುರುತು ಹಾಕಿ ತೆಗೆದುಕೊಂಡಿದ್ದಾರೆ. ಈ ವಿಷಯವನ್ನು ನಾನು ಘೋರ್ಪಡೆಯವರ ಮನೆಗೆ ಹೋಗಿ ಭೇಟಿ ಮಾಡಿದೆ. ಇವತ್ತಿನವರೆಗೂ ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ. ಇದರಲ್ಲಿ ಬಿಡಿಒ ಸಿಗ್ನೇಚರ್, ಜೆ. ಸಿಗ್ನೇಚರ್ ಇದೆ. ಆಗ ಮಂಡಲ್‌ಗಳು ಇದ್ದರು. ಮಂಡಲ್ ಪ್ರದಾನ ನನ್ನದೇ ಪಕ್ಷದವರು. ಅವರು ಸಹಿ ಮಾಡಿದ್ದಾರೆ ಎಂದು ನಾನು ಹೇಳಿದೆ. ಏನೂ ಇಲ್ಲ, 3,000 ರೂಪಾಯಿ ಕೊಟ್ಟಿದ್ದಾರೆ ಕಣ್ಣು ಮುಚ್ಚಿ ಮಾಡಿದರು. ಈ ಒಂದು ವ್ಯವಸ್ಥೆ ನಡೆಯುತ್ತಿದೆ. ಆದರೆ ಈ ತನಕ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಕ್ರಮ ತೆಗೆದುಕೊಂಡರೂ ತಿಳಿಸುತ್ತಿಲ್ಲ. ಇಂತಹ ಅನೇಕ ಪ್ರಮುಖರ ಹೆಸರುಗಳನ್ನು ತೆಗೆದುಕೊಂಡು ಬಿಲ್ ಎತ್ತಿದ್ದಾರೆ. ಏನೂ ಎನ್‌ಕ್ವೈರಿ ಆಗುತ್ತಿಲ್ಲ. ಪ್ರಕಾಶ್‌ರವರಿಗೆ ಹೇಳಿದೆ, ಪ್ರಕಾಶ್‌ರವರ ಹೆಸರು ಅಷ್ಟೇನೂ ಬರ್ಡನ್ ಆಗಲಿಲ್ಲ. ಇಷ್ಟು ಆದರೂ ಕ್ರಮ ತೆಗೆದುಕೊಂಡಿಲ್ಲ. ಆ ದೃಷ್ಟಿಯಿಂದ ಕ್ರಮ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ನಾನು ಧರಣಿ ಸತ್ಯಾಗ್ರಹ ಮಾಡುತ್ತೇನೆ. ಅದರ ಬಗ್ಗೆ ಸರ್ಕಾರದವರು ಉತ್ತರ ಕೊಡಬೇಕು.

ಶ್ರೀ ಜೆ. ಹೆಚ್. ಪಟೇಲ್ : ಅದರಲ್ಲಿ ಮಾನ್ಯ ಸದಸ್ಯರ ಹೆಸರು ಇತ್ತಾ?

ಅಧ್ಯಕ್ಷರು : ಸದಸ್ಯರ ಹೆಸರು, ಈ ಸದನದ ಸದಸ್ಯರಾಗಿದ್ದು ಮತ್ತು ಮೇಲ್ಮನೆ ಸದಸ್ಯರಾದ ಶ್ರೀಮಾನ್ ವೀರಯ್ಯ ಸ್ವಾಮಿಯವರದು, ಮಾಜಿ ಮುಖ್ಯ ಮಂತ್ರಿಗಳಾದ ಶ್ರೀಮಾನ್ ವೀರೇಂದ್ರ ಪಾಟೀಲರ ಮಗ ಕೈಲಾಸ ಪಾಟೀಲ್ ಅವರು ಹೆಸರೂ ಇತ್ತು. ಅವರ ಹೆಸರಿನಲ್ಲಿ ಹೆಬ್ಬೆಟ್ಟು ಒತ್ತಿ They have drawn the money. ಒಂದು ರೀತಿಯಾಗಿ ಮಾನಸಿಕ ವೈಪರೀತ್ಯಕ್ಕೆ ಒಳಗಾಗಿರುವಂತಹವರು ಇದನ್ನು ಮಾಡಿರುವುದು. It gives him of pleasure. ಅವರು ಈಗ ಏನು ಹೇಳುತ್ತಾರೆಂದರೆ, Twice I have brought it to the notice of the Government. he was incharge of the Rural Development Department. ಅವರ ಮನೆಗೆ ಹೋಗಿ ಹೇಳಿದೆ, ಆ ಮೇಲೆ ಪ್ರಕಾಶ್‌ರವರ ಗಮನಕ್ಕೆ ತಂದೆ. So far no action has been taken on those who have prepared the NMRs. And the tragedy is, services were not regularised also.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸನ್ಮಾನ್ಯ ಅಧ್ಯಕ್ಷರೇ, ನಮಗೆ ಇದು ಅರ್ಥವಾಗುತ್ತಿಲ್ಲ. ಏಕೆಂದರೆ ಒಂದು ಕಡೆ ಈ ರೀತಿಯಾಗಿ ನಡೆದಿರಬಹುದು, ಆದರೆ, Another thing is that, ಶಾಸಕರ ಹೆಸರುಗಳು, ಅದು ಎಮ್.ಎಲ್.ಸಿ ಹೆಸರು, ಅದರಲ್ಲಿ ಅವರೂ ಕೂಡ ಸುಮಾರು ಒಂದು ವರ್ಷ ಎಂಟು ತಿಂಗಳು ಅಲ್ಲೇ ಅವರ ಮತ ಕ್ಷೇತ್ರದಿಂದ ಮೆಂಬರ್, ಮಿನಿಸ್ಟರ್ ಆಗಿದ್ದರೂ ಕೂಡ ರಿವ್ಯೂ ಮಾಡುವುದು ಇವೆಲ್ಲಾ ಬರುತ್ತಿರುತ್ತವೆ. ಆದರೆ ಇಷ್ಟು ಆದ ಮೇಲೂ ಇದು ನಡೆದಿದೆ ಎಂದರೆ Something is.... ನಾನು ಒಂದು ಮೀಟಿಂಗ್ ಕರೆಯುತ್ತೇನೆ.ಮೀಟಿಂಗ್ ಕರೆದು ನನ್ನ ನೋಟಿಸ್‌ಗೆ ಬಂದಾಗ ಮಾಡದೆ ಇದ್ದರೆ ಆ ಅಧಿಕಾರಿಗಳನ್ನು ಏಕೆ ಇಡಬೇಕು, ಯಾರೇ ಇರಲಿ, ನೀವೇ ನಿಮ್ಮದೇ ಅಧಿಕಾರಿ ಎಂದು ಹೇಳುವುದಿಲ್ಲ.....

ಶ್ರೀ ವೈಜನಾಥ್ ಪಾಟೀಲ್ : ಆ ಅಧಿಕಾರಿಗಳು ಇವತ್ತು ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಆ ಅಸಿಸ್ಟೆಂಟ್ ಎಕ್ಸಿಕ್ಯುಟೀವ್ ಇಂಜಿನಿಯರ್ ಇರಲಿ, ಬೇರೆ ಇಂಜಿನಿಯರ್ ಇರಲಿ, Action should be taken against them also and it is our default also.

ಶ್ರೀ ಜೆ. ಹೆಚ್. ಪಟೇಲ್ : ಸಿಓಡಿಯಿಂದ ತನಿಖೆ ಮಾಡಿಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಒಬ್ಬ ಅಧಿಕಾರಿ ಸಾರ್ವಜನಿಕವಾಗಿ ಬಹಳ ಹಾನಿ ಮಾಡಿದ್ದಾರೆ. ದಯಮಾಡಿ ಇದು ಚರ್ಚೆಯಾಗಬೇಕು. ನನಗೆ ರಕ್ಷಣೆ ಕೊಡಬೇಕು.

ಅಧ್ಯಕ್ಷರು : ನಿಮಗೂ ರಕ್ಷಣೆ ಕೊಡುತ್ತೇನೆ, ಆ ಅಧಿಕಾರಿ ಅತ್ಯಂತ.....

ಶ್ರೀ ಜಗದೀಶ್ ಶೆಟ್ಟರ್ : 10,000 ಜನಸಂಖ್ಯೆ ಇರುವ ಗ್ರಾಮ ಪುನರ್ ವಸತಿ ಕೇಂದ್ರದ ವಿಷಯದಲ್ಲಿ ವಿನಾ ಕಾರಣ ತಮ್ಮ ತಪ್ಪನ್ನು ಮುಚ್ಚಿಕೊಳ್ಳುವುದಕ್ಕಾಗಿ ನನ್ನ ಹೆಸರನ್ನು ಬಳಕೆ ಮಾಡುತ್ತಿದ್ದಾರೆ. ಈ ವಿಚಾರದಲ್ಲಿ ತಪ್ಪು ಕಲ್ಪನೆ ಇದೆ.

ಅಧ್ಯಕ್ಷರು : ನಿಮ್ಮ ಸಮಸ್ಯೆ ಏನಿದೆ, ನಿಮ್ಮನ್ನು ಡಿಎಸ್ ಪಾಟೀಲರನ್ನು ನನ್ನ ಕೋಣೆಗೆ ಕರೆಯಿಸಿ ಮಾತನಾಡಿ ಆ ವಿಚಾರದಲ್ಲಿ ಏನು ಇದೆ, ನಾನು ನಿಮ್ಮ ಜೊತೆಗಿದ್ದೇನೆ. ನಿಮಗೆ ತೊಂದರೆಯಾಗದ ಹಾಗೆ ಮಾಡುತ್ತೇನೆ. ಜಾಮದಾರ್ ಅನ್ನತಕ್ಕಂತಹ ಅಧಿಕಾರಿ ಕೂಡ ನಮ್ಮಲ್ಲಿರತಕ್ಕಂತಹ ಅತ್ಯಂತ ಪ್ರಾಮಾಣಿಕ ಅಧಿಕಾರಿಗಳಲ್ಲಿ ಒಬ್ಬರು. ಅವರು ಏನಾದರೂ ಲಗುವಾಗಿ ಮಾತನಾಡಿದರೆ ಇರುವ ಒಬ್ಬರು ಇಬ್ಬರೂ ಕೂಡ ಉತ್ಸಾಹ ಕಡಿಮೆ ಆದರೆ ನಮ್ಮ ಆಡಳಿತ ಕೆಟ್ಟು ಹೋಗುತ್ತದೆ; ತಮ್ಮನ್ನು ನನ್ನ ಕಛೇರಿಗೆ ಕರೆಸುತ್ತೇನೆ, ನಿಮ್ಮನ್ನು ಹಿರಿಯರಾದ ಬಿ. ಎಸ್. ಪಾಟೀಲರನ್ನು ಕರೆಸಿಕೊಂಡು ನಾನು ನಿಮ್ಮ ಸಮಸ್ಯೆ ಏನಿದೆ ಅದಕ್ಕೆ ಪರಿಹಾರ ಕೊಡಿಸುತ್ತೇನೆ. ನಿಮಗೆ ಪರಿಹಾರ ಕೊಡಿಸುವುದು ನನ್ನ ಜವಾಬ್ದಾರಿ. ಇನ್ನು ಚಿಮ್ಮನಕಟ್ಟಿಯವರ ಗೌರವ ಶಿಕ್ಷಕರ ವಿಚಾರವಿದೆ. ಈ ದಿವಸ ಗೋವಿಂದೇಗೌಡರು ಪರ್ಮಿಷನ್ ತೆಗೆದುಕೊಂಡು ಹೋಗಿದ್ದಾರೆ. ಅವರಿಗೆ ಬೇರೆ ಕಾರ್ಯ ಇರುವುದರಿಂದ ಅವರು ಬರುವುದಕ್ಕಾಗಿಲ್ಲ, ಅವರು ಇದ್ದಾಗ ನಾಳೆ ಪ್ರಸ್ತಾಪ ಮಾಡಿ.